ಆರ್.ಎಂ.ಪಿ. ವೈದ್ಯರುಗಳ ಸೇವಾ ಜ್ಯೇಷ್ಠತೆ ಕುರಿತು

2215 - ಶ್ರೀ. ಯು.ಆರ್. ಸಭಾಪತಿ (ಉಡುಪಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಎಷ್ಟು ಮಂದಿ ಆರ್.ಎಂ.ಪಿ. ವೈದ್ಯರು ಪ್ರಸ್ತುತ ಸೇವೆ ಸಲ್ಲಿಸುತ್ತಿದ್ದಾರೆ.

ಆ) 1981ರಲ್ಲಿಯೇ ರಾಜ್ಯದ ಆರ್.ಎಂ.ಪಿ. ವೈದ್ಯರನ್ನು ಸರ್ಕಾರಿ ಸೇವೆಗೆ ವಿಲೀನ ಗೊಳಿಸಿದ್ದರೂ, ಇವರಿಗೆ 1992ರವರೆಗೆ ವೇತನ ಶ್ರೇಣಿ ನೀಡದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ? (ಈ ಬಗ್ಗೆ ಉಚ್ಚನ್ಯಾಯಾಲಯವು ನೀಡಿದ ಆದೇಶದ ವಿವರ ನೀಡವುದು)?

ಇ) ಆರ್.ಎಂ.ಪಿ. ವೈದ್ಯರ ಜೇಷ್ಠತಾ ಪಟ್ಟಿಯನ್ನು ಯಾವಾಗ ಪ್ರಕಟಿಸಲಾಗುವುದು?

ಡಾ॥ ಹೆಚ್.ಸಿ. ಮಹಾದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಭಾರತೀಯ ವೈದ್ಯ ಪದ್ಧತಿಗಳು ಮತ್ತು ಹೋಮಿಯೋಪತಿ ಇಲಾಖೆಯಡಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 8 ಜನ ಆರ್.ಎಂ.ಪಿ. ವೈದ್ಯರು ನಾಗರೀಕ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಬೇರೆ ಜಿಲ್ಲೆಯಲ್ಲಿ ಯಾರೂ ಆರ್.ಎಂ.ಪಿ. ವೈದ್ಯರು ಪ್ರಸ್ತುತ ನಾಗರೀಕ ಸೇವೆಯಲ್ಲಿ ಕಾರ್ಯನಿರ್ವಹಿಸುತ್ತಿಲ್ಲ. ಆದರೆ ಎಸ್.ಎಂ.ಪಿ : ಎ.ಎಂ.ಪಿ. ವೈದ್ಯರು ಉತ್ತರ ಕನ್ನಡದಲ್ಲಿ-7, ಧಾರವಾಡದಲ್ಲಿ -9, ಬಿಜಾಪುರದಲ್ಲಿ-30 ಜನ ಕಾರ್ಯ ನಿರ್ವಹಿಸುತ್ತಿದ್ದಾರೆ.

ಆ) ಆರ್.ಎಂ.ಪಿ. ವೈದ್ಯರ ಸೇವೆಯನ್ನು 1981ರಲ್ಲಿ ಸರ್ಕಾರಿ ಸೇವೆಯಲ್ಲಿ ವಿಲೀನಗೊಳಿಸಿಲ್ಲ. ಆದರೆ ಎಸ್.ಎಂ.ಪಿ. : ಎ.ಎಂ.ಪಿ. ವೈದ್ಯರ ಜೊತೆ ಕರ್ನಾಟಕ ನಾಗರೀಕ ಸೇವಾ (ಆರ್.ಎಂ.ಪಿ. : ಎಸ್.ಎಂ.ಪಿ. : ಎ.ಎಂ.ಪಿ. ವೈದ್ಯರೆಂದು ನೇಮಕಾತಿ ಹೊಂದಿದವರು ಭಾರತೀಯ ವೈದ್ಯ ಪದ್ಧತಿ ಮತ್ತು ಹೋಮಿಯೋಪತಿ ಇಲಾಖೆಯಲ್ಲಿ ವಿಲೀನಗೊಳಿಸುವ) (ವಿಶೇಷ) ನಿಯಮ 1992ರಲ್ಲಿ ಅದನ್ನು ಸರ್ಕಾರಿ ಸೇವೆಯಲ್ಲಿ ವಿಲೀನಗೊಂಡಿರುತ್ತಾರೆ. ದಿನಾಂಕ : 3-11-92 ರಿಂದ ಈ ನಿಯಮಗಳು ಜಾರಿಗೆ ಬಂದಿದ್ದು, ವೇತನ ಶ್ರೇಣಿ ವೇತನಗಳನ್ನು ದಿನಾಂಕ : 3-11-92 ರಿಂದಲೇ ಮಂಜೂರು ಮಾಡಲಾಗಿದೆ. ರಾಜ್ಯ ಉಚ್ಚ ನ್ಯಾಯಾಲಯವು ಈ ವಿಷಯದ ಬಗ್ಗೆ ಯಾವುದೇ ನಿರ್ದೇಶನಗಳನ್ನು ಈ ಇಲಾಖೆಗೆ ನೀಡಿರುವುದಿಲ್ಲ.

ಇ) 1992ರ ವಿಶೇಷ ನಿಯಮ 3(5) ರ ಅನ್ವಯ ಆರ್.ಎಂ.ಪಿ. ವೈದ್ಯರ ಸೇವೆಯನ್ನು ಜೇಷ್ಠತೆಗೆ ಪರಿಗಣಿಸುವಂತಿಲ್ಲ. ಈ ಇಲಾಖೆಯ ಮೇಲ್ವರ್ಗದ ಯಾವುದೇ ಹುದ್ದೆಯನ್ನು ಪದೋನ್ನತಿ ಮೂಲಕ ಹೊಂದಲು ನಿಯಮ 3(1) ರ ಅನ್ವಯ ಅವಾಕಾಶವಿಲ್ಲ. ಆದ್ದರಿಂದ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಿರುವುದಿಲ್ಲ.